ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಸರ್ಕಾರದ ವತಿಯಿಂದ ನಡೆಸುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಸಿಕ ರೂ.600/– ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಮಾಸಿಕ ರೂ.650/– ಆಹಾರ ವೆಚ್ಚ ಮಾಡಲಾಗುತ್ತದೆ. ಇದಲ್ಲದೆ, –

1. ಸೋಪು, ಎಣ್ಣೆ, ಪೇಸ್ಟ್ ಇತ್ಯಾದಿ – ಮಾಸಿಕ ರೂ.40/–
2. ಪಥ್ಯ ಪುಸ್ತಕ ಮತ್ತು ಲೇಖನ ಸಾಮಗ್ರಿ(ವಾರ್ಷಿಕ ರೂ.250/–)
3. ಆಯುಷ್ಕರ್ಮ – ವಾರ್ಷಿಕ ರೂ.60/–)
4. ಸಮವಸ್ತ್ರ – ವಾರ್ಷಿಕ ರೂ.500/–
5. ಹಾಸಿಗೆ ಹೊದಿಕೆ – ರೂ.400/–(3 ವರ್ಷಕ್ಕೆ ಒಮ್ಮೆ)

ಆ) ಹೌದು.

ಇ) ಹೌದು.

ಈ) 2010 ಮತ್ತು 2011 ನೇ ಸಾಲಿನಿಂದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಭೋಜನ ವೆಚ್ಚವನ್ನು ಅನುಕ್ರಮವಾಗಿ ಮಾಸಿಕ ರೂ.600/– ರಿಂದ ರೂ.650/–ಕ್ಕೆ ಹಾಗೂ ರೂ.650/– ರಿಂದ ರೂ.750/–ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

ಅಂಗವಿಕಲರಿಗೆ ನೀಡುತ್ತಿರುವ ತ್ರಿಚಕ್ರ ಮೋಟಾರು ಸೈಕಲ್ ವಿತರಣೆ

915 (1423) ಶ್ರೀ ರಾಜು ಕೆ (ರಾಮನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗವಿಕಲರಿಗೆ ನೀಡುತ್ತಿರುವ ತ್ರಿಚಕ್ರ ಮೋಟಾರು ಸೈಕಲ್ ವಿತರಣೆಯನ್ನು ಸಮರ್ಪಕವಾಗಿ ನೀಡಲಾಗುತ್ತಿದೆಯೇ;

ಆ) ಹಾಗಿದ್ದಲ್ಲಿ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ತ್ರಿಚಕ್ರವಾಹನ ಗಳಿಗಾಗಿ ಅರ್ಜಿ ಸಲ್ಲಿಸಿರುವ ಅಂಗವಿಕಲರುಗಳ ಸಂಖ್ಯೆ ಎಷ್ಟು? (ತಾಲ್ಲೂಕು ಮತ್ತು ಜಿಲ್ಲಾವಾರು ವಿವರಗಳನ್ನು ನೀಡುವುದು);

ಇ) ಕಳೆದ ಮೂರು ವರ್ಷಗಳಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ಅಂಗವಿಕಲರುಗಳಿಗೂ ತ್ರಿಚಕ್ರ ವಾಹನಗಳನ್ನು ಒದಗಿಸಲಾಗಿದೆಯೇ?

ಈ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು (ವಿವರಗಳನ್ನು ನೀಡುವುದು);

ಉ) ಬಾಕಿ ಉಳಿದಿರುವ ಅರ್ಜಿದಾರರಿಗೆ ತಕ್ಷಣವೇ ತ್ರಿಚಕ್ರವಾಹನ ಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಊ) ಹಾಗಿದ್ದಲ್ಲಿ, ಯಾವಾಗ ವಿತರಿಸಲಾಗುವುದು?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಕಳೆದ 03 ವರ್ಷಗಳಲ್ಲಿ ತ್ರಿಚಕ್ರ ವಾಹನ ಒದಗಿಸಲು 520 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಮತ್ತು ಈ) ಆಯವ್ಯಯ ಲಭ್ಯತೆಗನುಗುಣವಾಗಿ ವಿಶೇಷ ಪ್ರಕರಣದಡಿ ಸ್ವಯಂ ಉದ್ಯೋಗ ಹೊಂದಿದವರಿಗೆ/ಶೇಕಡ 50 ರಷ್ಟು ಹಣ ನೀಡಿದವರಿಗೆ ತ್ರಿಚಕ್ರವಾಹನಗಳನ್ನು ನೀಡಲಾಗುತ್ತಿದೆ.

ಉ) 2009–10ನೇ ಸಾಲಿನಲ್ಲಿ ಹಂಚಿಕೆಯಾದ ಅನುದಾನದಲ್ಲಿ ರೂ.10.00 ಲಕ್ಷ ವೆಚ್ಚದಲ್ಲಿ 50 ಅರ್ಹ ಅರ್ಜಿದಾರರಗೆ ತ್ರಿಚಕ್ರ ವಾಹನ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಅನುಬಂಧ

ತ್ರಿಚಕ್ರ ಮೋಟಾರ್ ಸೈಕಲ್‌ಗಳನ್ನು ಕೋರಿ ಅರ್ಜಿ ಸಲ್ಲಿಸಿದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ

ಜಿಲ್ಲೆಗಳ ಹೆಸರು	ಫಲಾನುಭವಿಗಳ ಸಂಖ್ಯೆ
ಬೆಂಗಳೂರು (ನ)	120
ಬೆಂಗಳೂರು (ಗ್ರಾ)	18
ಬೆಳಗಾಂ	08
ಬಳ್ಳಾರಿ	46

ಬೀದರ್	03
ಬಿಜಾಪುರ	38
ಬಾಗಲಕೋಟೆ	33
ಚಿತ್ರದುರ್ಗ	05
ಚಿಕ್ಕಮಗಳೂರು	03
ಚಾಮರಾಜನಗರ	22
ಧಾರವಾಡ	07
ದಕ್ಷಿಣ ಕನ್ನಡ	0
ದಾವಣಗೆರೆ	02
ಗುಲ್ಬರ್ಗಾ	62
ಗದಗ್	0
ಹಾಸನ	03
ಹಾವೇರಿ	02
ಕೊಡಗು	02
ಕೋಲಾರ	25
ಕೊಪ್ಪಳ	17
ಮೈಸೂರು	22
ಮಂಡ್ಯ	36
ರಾಯಚೂರು	21
ಶಿವಮೊಗ್ಗ	01
ತುಮಕೂರು	05
ಉತ್ತರ ಕನ್ನಡ	01
ಉಡುಪಿ	0
ಚಿಕ್ಕಬಳ್ಳಾಪುರ	04
ರಾಮನಗರ	14
ಒಟ್ಟು	**520**